ಕೆಲವರು ''ಭರ್ಮಣ್ಣ ಮಸ್ತಾಗಿ ದುಡ್ಡಿಸ್ಕಂಡು ಕಿರಿಸ್ತಾನ್ ಧರ್ಮುಕ್ಕೆ ಸೇರ್ಕಂಡ್ನಂತೆ. ಬೆಂಗ್ಳೂರ್ ಸೇರ್ಕಂಡು ಬಲು ಕಿಲಾಡಿ ಆಗ್ಬಿಟ್ಟ. ಅವರಪ್ಪ ಕಮ್ಮಿ ಇದ್ರೆ ಅಲ್ವಾ'' ಎಂದು ಪಿಸುಗುಟ್ಟಿಕೊಂಡಿದ್ದರು. ಪಕ್ಕದ ಮನೆಯ ಬೋರಯ್ಯನಂತೂ ಡಿ.ಸಿ. ಬ್ರೆಕ್ಟ್ ಎಂಬ ಶಬ್ದ ಕಿವಿಗೆ ಬಿದ್ದು ಅದೊಂದು ಸರ್ಕಾರಿ ನೌಕರಿಯಿರಬೇಕೆಂದುಕೊಂಡು ಎಸ್‌ಎಸ್‌ಎಲ್‌ಸಿಯಲ್ಲಿ ಢುಂಕಿ ಹೊಡೆದಿದ್ದ ಮಗನನ್ನು ಉದ್ದೇಶಿಸಿ ''ಆ ಭರಮಣ್ಣನ ಕಾಲು ಕೆಳ್ಗೆ ನೂರು ಸಾರಿ ತೂರು ಬುದ್ಧಿ ಬರ್‍ತೈತೆ. ನಾಕೊರ್ಷ ಕಷ್ಟಪಟ್ಟು ಓದಿ ಡಿಸಿ ಕೆಲ್ಸ ಸಂಪಾದ್ನೆ ಮಾಡೆವ್ನೆ. ಇನ್ನ ಚಿಕ್ಕಮಾರಯ್ಯ ಬೆಂಗಳೂರು ಪೇಟೇಲಿ ಬಂಗ್ಲೆ ಸೇರ್ಕಂಬ್ತಾನೆ. ಎಲ್ಲಾ ಕೇಳ್ಕಂಡ್ ಬಂದಿರ್ಬೇಕು'' ಎಂದು ಹೊಟ್ಟೆ ಉರ್ಕಂಡು ಉಗಿದಿದ್ದ. ಬ್ರೆಕ್ಟ್ ಇವಕ್ಕೆಲ್ಲ ತಲೆ ಕೆಡಿಸಿಕೊಳ್ಳಲಿಲ್ಲ. ಹಳೆ ಮತ್ತು ಹೊಸ ತಲೆಮಾರುಗಳ ನಡುವಿನ ಸಂಘರ್ಷಗಳನ್ನು ಈಗಾಗಲೇ ಅವನು ತಿಳಿದುಕೊಂಡವನಾಗಿದ್ದ. ಅಲ್ಲದೆ ಹಳ್ಳಿಗಾಡಿನ ಅನಕ್ಷರಸ್ಥ ಸಮುದಾಯಗಳನ್ನು ಬದಲಾಯಿಸಬೇಕಾದರೆ ತುಂಬಾ ವರ್ಷಗಳ ಪರಿಶ್ರಮ ಬೇಕಾಗುತ್ತದೆಂಬುದನ್ನೂ ಬಲ್ಲವನಾಗಿದ್ದ. ಬ್ರೆಕ್ಟನಿಗೆ ನಿಜವಾಗಿಯೂ ಸಮಸ್ಯೆ ಎದುರಾದದ್ದು ಹೊಸದಾಗಿ ಕ್ಯಾಸ್ಟ್ ಸರ್ಟಿಫಿಕೇಟ್ ಮಾಡಿಸಲೆಂದು ತಾಲ್ಲೂಕು ಆಫೀಸಿಗೆ ಹೋದಾಗ. ಬ್ರೆಕ್ಟನನ್ನು, ಬ್ರೆಕ್ಟನ ಅಪ್ಲಿಕೇಶನನ್ನು ನೋಡಿದ ತಾಲ್ಲೂಕು ಆಫೀಸಿನ ಸಿಬ್ಬಂದಿ ಅವನನ್ನು ತಹಶೀಲ್ದಾರರ ಹತ್ತಿರವೇ ಕಳಿಸಿದ್ದರು. ಬ್ರೆಕ್ಟ್ ಧೈರ್ಯದಿಂದಲೇ ಬ್ಯಾಗಿನಲ್ಲಿದ್ದ ಅಫಿಡವಿಟನ್ನು ಮತ್ತು ಪತ್ರಿಕೆಯಲ್ಲಿ ಬಂದಿದ್ದ ಜಾಹೀರಾತನ್ನು ತಹಶೀಲ್ದಾರರಿಗೆ ತೋರಿಸಿ ವಿವರಿಸಿದ್ದನು. ತಹಶೀಲ್ದಾರ್ ಇರಲೆಂದು ಡಿ.ಸಿ ಆಫೀಸಿಗೊಂದು ಫೋನ್ ಮಾಡಿ ಪಕ್ಕಾ ಮಾಡಿಕೊಂಡು ಬ್ರೆಕ್ಟ್ ಹೆಸರಿನಲ್ಲಿ ಕ್ಯಾಸ್ಟ್ ಸರ್ಟಿಫಿಕೇಟ್ ಮಾಡಿ ಕಳಿಸಿದ್ದರು. ಒಂದೇ ವಾರದಲ್ಲಿ ಓಡಾಡಿ 'ಬ್ರೆಕ್ಟ್' ಹೆಸರಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಮಾರ್ಕ್ಸ್ ಕಾರ್ಡುಗಳನ್ನೂ ಪಡೆದುಕೊಂಡು ನಿಶ್ಚಿಂತನಾದ.

ಪ್ರಿಯ ಓದುಗರೇ, ಈಗ ವರ್ತಮಾನಕ್ಕೆ ಬರೋಣ. ಬ್ರೆಕ್ಟ್ ಹಾಸ್ಟೆಲ್‌ಗೆ ಬಂದವನು ಸ್ನಾನ ಮಾಡಿ ತಿಂಡಿ ತಿನ್ನಲು ಡೈನಿಂಗ್ ಹಾಲ್‌ಗೆ ಹೋದಾಗ ಎಲ್ಲಾ ಫ್ಯಾಕಲ್ಟಿಗಳು, ವಿದ್ಯಾರ್ಥಿಗಳೇ ಅಲ್ಲದೆ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಕೂಡ ''ಓಹ್, ಪೇಪರ್ ಓದಿದ್ವಿ. ರಿಯಲಿ ಗ್ರೇಟ್. ಯು ಡಿಸರ್ವ್ ಇಟ್.'' ''ಬ್ರೆಕ್ಟ್ ನಿಜಕ್ಕೂ ಖುಷಿಯಾಗುತ್ತಿದೆ. ನಮ್ಮ ಕಮ್ಯುನಿಟಿ ಕೂಡ ಯಾವುದರಲ್ಲೂ ಕಡಿಮೆಯಿಲ್ಲ ಎಂಬುದನ್ನು ಸಾಬೀತು ಪಡಿಸಿದಿರಿ.'' ''ಇಂಥ ಒಳ್ಳೆ ಹೆಸರು

